# ಹುಲಿ ಸವಾರಿ

■ ಲಲಿತಾ ಹೊಸಪ್ಯಾಟಿ
ಕಲೆ: ಸಂತೋಷ್ ಸಸಿಹಿತ್ಲು



ಸಮೃದ್ಧ ಎಂಬ ಕಾಡೊಂದಿತ್ತು. ಆ ಕಾಡಿನ ಅಂಚಿನಲ್ಲಿ ಪುಟ್ಟ ಹಳ್ಳಿ ಕನಸಪುರ. ಅಲ್ಲಿ ಶ್ರೀನಿಧಿಯ ಅಜ್ಜಿ ಇರುತ್ತಿದ್ದಳು. ಬೆಂಗಳೂರಿನಲ್ಲಿ ಓದುತ್ತಿದ್ದ ಶ್ರೀನಿಧಿ ಬೇಸಿಗೆ ರಜೆಯಲ್ಲಿ ಅಜ್ಜಿಯ ಊರಿಗೆ ಬಂದಳು. ಅವಳಿಗೆ ಅಮ್ಮ ವಾರಿಧಿಯೂ ಜೊತೆಯಾದಳು. ಅವಳ ಅಜ್ಜಿ ಒಂದು ಮೇಕೆ ಸಾಕಿದ್ದಳು. ಅಜ್ಜಿ ದಿನವೂ ಮೇಕೆಯ ಹಾಲನ್ನು ಹಿಂಡಿ, ಬಿಸಿಮಾಡಿ ಬೆಲ್ಲ ಸೇರಿಸಿ ಕುಡಿಯಲು ಕೊಟ್ಟರೆ ಅಮೃತ. ಹೊಲದಲ್ಲಿ ಬೆಳೆದ ಹಸಿಶೇಂಗವನ್ನು ಕೆಂಡದಲ್ಲಿ ಸುಟ್ಟು ಕೊಡುತ್ತಿದ್ದಳು ಅಜ್ಜಿ. ಪಿಜ್ಜಾ, ಬರ್ಗರ್, ಕೇಕು ಚೇಪ್ಸ್ ರುಚಿಗಿಂತ ಹೊಸ ರುಚಿಗೆ ಶ್ರೀನಿಧಿ ಮರುಳಾದಳು.

ಒಂದಿನ ಅಜ್ಜಿ ಸೂರ್ಯೋದಯದ ಹೊತ್ತಿಗೆ ಎದ್ದು, ಅಂಗಳದ ಕಸ ಗುಡಿಸುತ್ತಿದ್ದಳು. ಕೋಳಿಯ ಗೂಡಿನ ಪಕ್ಕ ಹಳದಿ ಕಪ್ಪು ಪಟ್ಟಾಪಟ್ಟೆಯ ಗುಡ್ಡೆ ಕಾಣಿಸಿತು. ಕಣ್ಣುಜ್ಜುತ್ತಾ ಎದ್ದು ಬಂದ ಶ್ರೀನಿಧಿಗೆ ಸೂರ್ಯನ ರಶ್ಮಿಯಲ್ಲಿ ಹೊಳೆಯುತ್ತಿದ್ದ ಆ ಬಣ್ಣದ ಗುಡ್ಡೆ ಮೇಲೆ ಕುತೂಹಲ. ಇನ್ನೇನು ಮುಟ್ಟಬೇಕು ಅಷ್ಟರಲ್ಲಿ ಓಡುತ್ತಾ ಬಂದ ತಾಯಿ ಅಚ್ಚರಿಯಲ್ಲಿ ಬಾಯಿಯನ್ನು ಹಿಡಿದು ನಿಂತೇ ಬಿಟ್ಟಳು.

ಶ್ರೀನಿಧಿ ಹುಲಿಯ ಪಕ್ಕದಲ್ಲಿಯೇ ನಿಂತಿದ್ದಾಳೆ. ಕಣ್ಬಿಟ್ಟ ಹುಲಿ ಗರ್ಜಿಸುತ್ತಿಲ್ಲ. ಹಳದಿ ಕಣ್ಣುಗಳು ಫಳಫಳನೆ ಹೊಳೆಯುತ್ತಿವೆ. ಪಕ್ಕದಲ್ಲಿ ಬೆಕ್ಕಿನಂತಹ ಹುಲಿಮರಿ ಕಣ್ಣುಮುಚ್ಚಿ ಮಲಗಿದೆ. ಶ್ರೀನಿಧಿ ಅದರ ಮೇಲೆ ಕೈಯಾಡಿಸಿದರೂ ಸುಮ್ಮನಿದೆ. ಹುಲಿ ಹೊಟ್ಟೆಯ ಹತ್ತಿರ ಗಾಯ. ರಕ್ತ ಜಿನುಗಿ ಹೆಪ್ಪುಗಟ್ಟಿದೆ. ಆ ಸ್ಥಿತಿಯಲ್ಲಿ ಹುಲಿ ದೈನ್ಯತೆಯಿಂದ ಶ್ರೀನಿಧಿ ಕಡೆ ನೋಡಿತು.

ಹುಲಿಯನ್ನು ಬಿಟ್ಟು ಹುಲಿ ಮರಿಯನ್ನು ಎತ್ತಿಕೊಂಡು ಶ್ರೀನಿಧಿ ಒಳ ಬಂದಳು. 'ಹುಲಿ ಮರಿಯಾದರೂ ಹಸಿದು ಸಾಯುತ್ತಿರುವಾಗ ಹಾಲೇನು, ಬೇಟೆಯ ಮಾಂಸವೇನು ಎಲ್ಲಾ ಒಂದೇ' ಕುಡಿಯುತ್ತೆ ಕುಡಿಸು ಎಂದು ಅಜ್ಜಿ ಹುಲಿ ಮರಿಗೂ ಶ್ರೀನಿಧಿಗೂ ಹಾಲು ಕೊಟ್ಟಳು. ಅದು ಬಡಬಡನೇ ಕುಡಿಯಿತು.

ಹಾಲು ಕುಡಿಸಿ ಹುಲಿಮರಿಯನ್ನು ಬಿಡಲು ಹೊರಗೆ ಬಂದಳು ಶ್ರೀನಿಧಿ. ಅಲ್ಲಿ ತಾಯಿ ಹುಲಿಯೇ ನಾಪತ್ತೆ. ದೂರ ನಡೆದ ಹೆಜ್ಜೆ ಗುರುತುಗಳು ಕಂಡವು. ಹುಲಿಮರಿಯನ್ನು ತೊರೆದು ಹೊರಟು ಹೋಗಿತ್ತು.

ಹುಲಿಮರಿಯನ್ನು ಬಿಡಲಾಗದೇ ಸಾಕಿದಳು ಶ್ರೀನಿಧಿ. ರಜೆ ಮುಗಿಯುತ್ತಾ ಬಂತು. ಹುಲಿಯನ್ನು ಬಿಟ್ಟು ಬರಲು ಕಾಡಿಗೆ ಬಂದಳು. ಹುಲಿಯಮ್ಮ ಬಾ! ನಿನ್ನ ಮಗಳು ಹುಲಿಮರಿ ಈಗ ಬೆಳೆದು ದೊಡ್ಡದಾಗಿದೆ. ನೋಡು ಎಂದು ಕರೆದಳು. ಹುಲಿ ಗುಲಾಬಿ ಬಣ್ಣದ ಫ್ರಾಕ್ ಹಾಕಿಕೊಂಡು ತಲೆಗೆ ಒಂದು ಹೇರ್‌ಬ್ಯಾಂಡ್, ಕಣ್ಣಿಗೆ ಕಾಡಿಗೆ, ತುಟಿಗೆ ಲಿಪ್‌ಸ್ಟಿಕ್ ಮೆತ್ತಿಕೊಂಡಿತ್ತು. ಮುದ್ದು ಮುದ್ದಾಗಿ ಕಾಣುತ್ತಿದ್ದ ಮರಿ ಕಂಡ ಹುಲಿಗೆ ಸಂತೋಷ. 'ನರರ ನಾಡು ಹೊಕ್ಕ ಹುಲಿ ಮರಳಿ ಕಾಡ ಮುಖ ಕಾಣದು' ಎಂಬ ಮಾತು ಸುಳ್ಳಾಯಿತು ಎಂದು ಕೃತಜ್ಞತೆ ಹೇಳಿತು. ಹುಲಿಮರಿಯನ್ನು ತಬ್ಬಿ ನಾಲಿಗೆ ಚಾಚಿ ನೆಕ್ಕಿತು. ತಾಯಿಯನ್ನು ಗುರ್ತಿಸಿದ ಮರಿಹುಲಿ ಬೆನ್ನೇರಿ ಕುಣಿದಾಡಿತು. ಕಾಲುಗಳಿಂದ ತಾಯಿ ಮುಖದ ಮೇಲೆ ಮುಂಗಾಲನ್ನು ಆಡಿಸಿತು.